ಶ್ರೀ ಜಿ. ಬಿ. ಶಂಕರ ರಾವ್.–5 ಮೈಲಿ ಟ್ಯಾಕಲ್ ಮಾಡಿದೆ, ಸಂಚಾರಕ್ಕೆ ಅನುಕೂಲವಾಗಿದೆ.

ಶ್ರೀ ಕೆ. ಸಿ. ರೇವಣ್ಣ ಸಿದ್ದಪ್ಪ.—ಈಗ ಮಾಡಿರುವ ರಸ್ತೆಗಳು ಪೂರ್ಣವಾಗದಿರುವುದರಿಂದ ಹಣ ದುರ್ವ್ಯಯವಾಗುವುದಿಲ್ಲವೇ ?

ಶ್ರೀ ಜಿ. ಬಿ. ಶಂಕರ ರಾವ್.—ಆಗುವುದಿಲ್ಲ, ಆದಷ್ಟು ಮಟ್ಟಿಗೆ ಅನುಕೂಲ ಕಲ್ಪಿಸಲಾಗಿದೆ.

Handing over the maintenance of roadside trees from Revenue Department to P.W.D.

*Q.—113 Sri R. N. LAKSHMIPATHI (Gauribidanur).—

Will the Government be pleased to state :—

(*a*) when they have passed orders for handing over the maintenance of roadside trees from Revenue Department to the Public Works Department ;

(*b*) whether the Government have intimated the 'Hukdars (*i.e.*, owners) who have reared and protected the trees while handing over these trees ?

A.— Sri M. V. KRISHNAPPA (Minister for Revenue).—

(*a*) On 3-11-1958.

(*b*) No.

ಶ್ರೀ ಆರ್. ಎನ್. ಲಕ್ಷ್ಮೀಪತಿ.—(ಬಿ) ಪ್ರಶ್ನೆಗೆ ಉತ್ತರವಾಗಿ ಮರಗಳನ್ನು ಬೆಳೆಸಿದವರಿಗೆ ತಿಳಿವಳಿಕೆ ಕೊಟ್ಟಿಲ್ಲವೆಂದು ಹೇಳಿದೆ. ಕೊಡದಿರುವುದಕ್ಕೆ ಕಾರಣವೇನು ?

†ಶ್ರೀ ಎಂ. ವಿ. ಕೃಷ್ಣಪ್ಪ.—ಅವರಿಗೆ ನಾವು ತಿಳಿಸಬೇಕಾಗಿಲ್ಲ. ರಸ್ತೆಗಳಲ್ಲಿರುವ ಸಾಲು ಮರಗಳು ಅನೇಕ ಇಲಾಖೆಗಳ ಛಾರ್ಜಿನಲ್ಲಿದ್ದವು. ಅವನ್ನು ಒಂದೇ ಇಲಾಖೆಗೆ ವರ್ಗಾಯಿಸುವುದು ಉತ್ತಮವೆಂದು ಭಾವಿಸಿ ಪಬ್ಲಿಕ್‌ವರ್ಕ್ಸ್ ಇಲಾಖೆಗೆ ವಹಿಸಿದ್ದೇವೆ. ಆ ಇಲಾಖೆಯಲ್ಲಿ ಗ್ಯಾಂಗ್‌ಮನ್, ವಾಚ್‌ಮನ್ ಮುಂತಾದವರಿರುವುದರಿಂದ ಅವರು ಮರಗಳನ್ನು ಯಾರೂ ಕಡಿಯದಂತೆ ನೋಡಿಕೊಳ್ಳುತ್ತಾರೆ.

ಶ್ರೀ ಸಿ. ಆರ್. ರಂಗೇಗೌಡ.—ರೆವೆನ್ಯೂ ಇಲಾಖೆಯು ವಶವಲ್ಲದ್ದಾಗ ರೆವೆನ್ಯೂ ಇನ್‌ಸ್ಪೆಕ್ಟರು ಪಟೇಲ ಶ್ಯಾನುಭೋಗರು ನೋಡಿಕೊಳ್ಳುತ್ತಿದ್ದರು. ಈಗ ಸರಿಯಾಗಿ ನೋಡಿಕೊಳ್ಳುವವರಿಲ್ಲದೆ ಮರಗಳು ಪೋರಾಗುತ್ತಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ರೆವೆನ್ಯೂ ಇಲಾಖೆ ನೋಡಿಕೊಳ್ಳುತ್ತಿದ್ದಾಗಲೂ ಕೂಡ ಕೆಲವು ಕಡೆ ಕಡಿಯುತ್ತಿದ್ದರು. ಈಗ ಪಬ್ಲಿಕ್‌ವರ್ಕ್ಸ್ ಇಲಾಖೆ ಛಾರ್ಜಿಗೆ ವಹಿಸಿರುವುದರಿಂದ ಅವರೇ ರಸ್ತೆ ಮೈನ್‌ಟೈನ್ ಮಾಡುವುದರಿಂದ ಅವನ್ನು ಅವರೇ ನೋಡಿಕೊಳ್ಳಲು ಅನುಕೂಲ ಎಂದು ಅವರಿಗೆ ವಹಿಸಲಾಗಿದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಖಾಸಗಿಯವರು ಮರ ಬೆಳೆಸಿರುವ ಸಂದರ್ಭದಲ್ಲಿ ಅವರ ಸನ್ನದನ್ನು ರೆವೆನ್ಯೂ ಇಲಾಖೆ ಪಬ್ಲಿಕ್ಸ್ ಇಲಾಖೆ ಕೊಡದಿರುವುದರಿಂದ ಮರಗಳನ್ನು ಹರಾಜು ಮಾಡುವಾಗ ಬೆಳೆಸಿರುವವರಿಗೆ ಪರಿಹಾರ ಕೊಡುವ ನಷ್ಟವಾಗುತ್ತಿರುವುದು ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ನನ್ನದಿದ್ದರೆ ಮರ ಬೆಳೆಸುವವರಿಗೆ ಯಾವ ಇಲಾಖೆಗೆ ಅವು ಸೇರಿದ್ದರೂ ಪರಿಹಾರ ಬರಬೇಕು.

---

†Indicates that the remarks or speeches have not been revised by the member concerned.

ಶ್ರೀ ಬಿ. ಸುಬ್ಬರಾಯಪ್ಪ.—ಬೆಂಗಳೂರಿನಿಂದ ಬಳ್ಳಾರಿಗೆ ಹೋಗುವ ರಸ್ತೆಯಲ್ಲಿ ನಾಲುಮರ ಗಳನ್ನು ಕತ್ತರಿಸುತ್ತಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಾತಂತ್ರ್ಯ ಬಂದಮೇಲೆ ನಾಲುಮರ ಕಡಿಯುವುದು ಜಾಸ್ತಿ ಯಾಗಿದೆ. ಈಗ ಸ್ವಂತ ಆಸ್ತಿ ಮಾಡಿಕೊಳ್ಳಲು ಹೆಚ್ಚು ಗಮನಕೊಡುತ್ತಿದ್ದಾರೆ. ನಾಲುಮರ ಗಳಿರುವ ಪಕ್ಕದ ಜಮೀನುಗಳಲ್ಲಿ ಸರ್ವೆಮರ ಮುಂತಾದುವನ್ನು ಬೆಳೆಸುತ್ತಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—ನನ್ನದಿದ್ದರೂ ನಹ ಪಬ್ಲಿಕ್‌ವರ್ಕ್ಸ್ ಇಲಾಖೆ ಅದಕ್ಕೆ ಗಮನ ಕೊಡದಿರು ವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನನ್ನದಿದ್ದರೆ ಕೋರ್ಟಿಗೆ ಹೋಗಬಹುದು, ಅದಕ್ಕೆ ಅವಕಾಶವಿದೆ

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಪಬ್ಲಿಕ್‌ವರ್ಕ್ಸ್ ಇಲಾಖೆಗೆ ವರ್ಗಮಾಡಿದಮೇಲೆ ತಾಲ್ಲೂಕ ಆಫೀಸಿನಲ್ಲಿ ರಿಜಿಸ್ಟರಿನಲ್ಲಿ ಏನು ದಾಖಲೆ ಇಸೆ ಎಂಬುದನ್ನು ನೋಡಿ ನನ್ನದಿನ ದಾಖಲೆಯನ್ನು ಆ ಇಲಾಖೆಗೆ ವರ್ಗಾಯಿಸಬೇಕಾಗಿತ್ತು. ಈಗಲಾದರೂ ಕೂಡ ಹಾಗೆ ಮಾಡಲು ಆದೇಶ ನೀಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ನನ್ನದು ರೈತರ ವಶದಲ್ಲಿದೆ. ಆದುದರಿಂದ ಯಾವ ಇಲಾಖೆಗೆ ವರ್ಗಾಯಿಸಿದರೂ ಕೂಡ ತಮಗೆ ಬರಬೇಕಾದ್ದನ್ನು ತೆಗೆದುಕೊಳ್ಳಲು ಹಕ್ಕಿದೆ. ಆದುದರಿಂದ ನನ್ನದಿರುವವರಿಗೆ ತೊಂದರೆಯಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸ್ವಾಮಿ, ಡೆಪ್ಯುಟಿಕಮೀಷನರ್ ಅವರು ಸ್ಪೇ ಆರ್ಡರ್ ಕೊಟ್ಟು ಅದನ್ನು ಎನ್‌ಕ್ಯಾಯರಿ ಮಾಡುತ್ತಿದ್ದಾರೆ. ಮರಗಳ ಹಕ್ಕುದಾರರಿಗೆ ಪಿ. ಡಬ್ಲ್ಯೂ. ಡಿ. ಯವರಿಂದ ತೊಂದರೆಯಾಗಿದೆ ಆದುದರಿಂದ ಈ ಪ್ರಶ್ನೆ ನಾನು ತಂದಿದ್ದೇನೆ. ಆದಷ್ಟು ಜಾಗ್ರತೆ ರೆವೆನ್ಯೂ ಇಲಾಖೆಯವರು ಪಿ. ಡಬ್ಲ್ಯೂ. ಡಿ. ಇಲಾಖೆಗೆ ಕಾಗದ ಬರೆದುಬಿಟ್ಟು ಕೂಡಲೆ ಅವರಿಗೆ ಕಾಂಪೆನ್ ಸೇಷನ್ ಕೊಡುವ ಹಾಗೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳು ತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಹಾಗೆ ಬರೆದಿರುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ಬೆಂಗಳೂರು ರಸ್ತೆ ಪಕ್ಕದಲ್ಲಿ ಮರಗಳನ್ನು ಬೆಳೆಸಿದ ಬಗ್ಗೆ ನನ್ನದು ಇರು ವುದನ್ನು ತೋರಿಸಿದರೂ ಕೂಡ ಅದನ್ನು ತಿರಸ್ಕರಿಸಿ ಅವರಿಗೆ ಅನುಕೂಲ ಮಾಡಿರುವುದರಿಂದ ಅವರ ಹಕ್ಕಿಗೆ ಚ್ಯುತಿ ಬಂದಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಇಂಥ ಮೂರು ನಾಲ್ಕು ಉದಾ ಹರಣೆಗಳನ್ನು ತೋರಿಸಬಹುದು.

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿ ಒಳ್ಳೆ ಮರಗಳು ಇವೆ ಎಂಬುದು ಗೊತ್ತಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೆಂಗಳೂರು ಪೂನಾ ನ್ಯಾಷನಲ್ ಹೈ ವೇ ತಾವರಕೆರೆ ಹತ್ತಿರ ಮರಗಳ ಹಕ್ಕಿನ ಬಗ್ಗೆ ರೆವೆನ್ಯೂ ಇಲಾಖೆಗೂ ಪಂಚಾಯತಿಯವರಿಗೂ ವ್ಯಾಜ್ಯ ಬಂದಿದೆ. ಪಂಚಾಯತಿಯವರು ಮರಗಳು ನಮ್ಮದು ಎನ್ನುತ್ತಾರೆ. ಸರಕಾರ ಸ್ಪೇ ಆರ್ಡರ್ ಕೊಟ್ಟಿದೆ. ಪಂಚಾಯತಿ ರೂಲ್ಸು ಪ್ರಕಾರ ಅವರ ಹದ್ದಿನಲ್ಲಿರುವ ಮರಗಳು ಅವರಿಗೆ ಸೇರಿದ್ದಾದುದರಿಂದ ರೆವೆನ್ಯೂ ಮತ್ತು ಪಿ. ಡಬ್ಲ್ಯೂ. ಡಿ. ಯವರು ಸೇರಿ ಪಂಚಾಯತಿಯವರಿಗೆ ಕೊಡುವುದಕ್ಕೆ ಸಾಧ್ಯ ವಾಗುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವರಕೆರೆ ರಂಗಸ್ವಾಮಿ ಮತ್ತು ದಿನ್ನೆ ವೆಂಕಟರಮಣ ಸ್ವಾಮಿ ದೇವಸ್ಥಾನಕ್ಕೆ ಅದರ ಉತ್ಪತ್ತಿ ಹೋಗುತ್ತದೆ. ಎರಡು ದೇವಸ್ಥಾನಗಳಿಗೆ ಹುಣಸೇಮರದ ಉತ್ಪತ್ತಿ ಹೋಗುತ್ತದೆ. ಇದರ ಬಗ್ಗೆ ಪಿ. ಡಬ್ಲ್ಯೂ. ಡಿ. ಕ್ವೆಶ್ಚನ್ ಮಾಡಿದರು. ಆಗ್ಗೆ ಇದಕ್ಕೆ ಸಂಬಂಧಪಟ್ಟ ಸದಸ್ಯರು ನನ್ನ ಹತ್ತಿರ ಬಂದು ಕೇಳಿಕೊಂಡಿದ್ದರಿಂದ ಸ್ಪೇ ಆರ್ಡರ್ ಕೊಟ್ಟಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ.—ರಸ್ತೆ ಪಕ್ಕದಲ್ಲಿರುವ ಮರಗಳಿಂದ ದೊರೆಯುವ 5 ಸಾವಿರ ರೂಪಾಯಿ ಬೆಲೆಬಾಳುವ ಹುಣುಸೇ ಹಣ್ಣನ್ನು ಬೇರೆಯವರು ತೆಗೆದುಕೊಂಡು ಹೋಗುತ್ತಿದ್ದಾರೆ. ಆದುದರಿಂದ ಸೂಕ್ತ ಕ್ರಮ ತೆಗೆದು ಕೊಳ್ಳುವಿರಾ ?

ಶ್ರೀ ಎಂ. ವಿ. ಕೃಷ್ಣಪ.—ದೇವಸ್ಥಾನಕ್ಕೆ ಬರುವಂಥ ಉತ್ಪತ್ತಿ ದೇವರಿಗೆ ಹೋಗುವುದು ಉತ್ಸವ ಎಂದು ನನ್ನ ಖಚಿತ ಅಭಿಪ್ರಾಯವಾಗಿದೆ.